OS – 009

**I Semester B.Com. Examination, October/November 2012**

**(Repeaters Scheme)**

**(Prior to 2011-12)**

**ಕನ್ನಡ ಭಾಷಾ ಪತ್ರಿಕೆ – I**

**ಸಾಹಿತ್ಯ ಸಮನ್ವಯ – ೧ ಮತ್ತು ಗುಣಮುಖ**

Time : 3 Hours Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : **(1×10=10)**

1) ದುರ್ಯೋಧನನ ಹೆಂಡತಿಯ ಹೆಸರೇನು ?

2) ಹರಿಹರನ ಆರಾಧ್ಯ ದೈವ ಯಾವುದು ?

3) ಪಂಪ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಯಾರನ್ನು ಅರ್ಜುನನೊಂದಿಗೆ ಸಮೀಕರಿಸಿದ್ದಾನೆ ?

4) ತಿರುನೀಲಕಂಠ ದಂಪತಿಗಳು ಎಲ್ಲಿ ವಾಸಿಸುತ್ತಿದ್ದರು ?

5) ರಾಮಿ ಯಾರನ್ನು ಮದುವೆಯಾದಳು ?

6) ತಾಯಿ, ಮಗಳು ರುದ್ರಪ್ಪನ ಖಡ್ಗವನ್ನು ಯಾವ ಬಾವಿಗೆ ಎಸೆಯುತ್ತಾರೆ ?

7) ನಾರಣಪ್ಪ ದ್ರೌಪದಿಯ ಕೂದಲನ್ನು ಏನೆಂದು ಕರೆದಿದ್ದಾನೆ ?

8) ರತ್ನ ಹೋಗುತ್ತಿದ್ದ ಪಡಖಾನೆಯ ಯಜಮಾನನ ಹೆಸರೇನು ?

9) 'ಗುಣಮುಖ' ನಾಟಕದ ಕರ್ತೃ ಯಾರು ?

10) ನಾದಿರ್‌ಷಾನ ದಂಡನಾಯಕನ ಹೆಸರೇನು ?

P.T.O.

II. ಯಾವುದಾದರೂ **ಐದಕ್ಕೆ** ಟಿಪ್ಪಣಿ ಬರೆಯಿರಿ : **(5×2=10)**

1) ಪಂಪ

2) ಗಂಧರ್ವರು

3) ಷಟ್ಪದಿ

4) ಪ್ರಾತಿಕಾಮಿ

5) ಪ್ರೇಮಾಭಟ್

6) ಗೌರವ್ವ

7) ಜೂಜು

8) ನಿಜಾಮ್-ಉಲ್-ಮುಲ್ಕ್

III. ಯಾವುದಾದರೂ **ಒಂದು** ಕಾವ್ಯ ಭಾಗವನ್ನು ವಿಶ್ಲೇಷಿಸಿ : **(1×6=6)**

ಪಿಡಿದುಯ್ದುದು ಗಂಧರ್ವರ

ಪಡೆಗಡ ನಿಮ್ಮಣ್ಣನಂ ಸುಯೋಧನನನಿದಂ

ಕಡೆಗಣಿಸಲಾಗ ನಮಗೀ

ಗಡೆ ಬೇಗಂ ಬಿಡಿಸಿ ತರ್ಪುದಾತನ ಸೆರೆಯಂ

ಅಥವಾ

ಕಳಚಿ ದುರಿಯೋಧನನ ಬೆಳುಗೊಡೆ

ನೆಲಕೆ ಬೀಳ್ವಂದದಲಿ ಕೌರವ

ಕುಲದ ನಿಖಿಳೈಶ್ವರ್ಯವಿಳೆಗೊರ್ಗುಡಿಸಿ ಕೆಡೆವಂತೆ

ಥಳಥಳಿಪ ನಗೆಮೊಗದ ಗಂಟಿಕಿ

ಬಲಿದ ಹುಬ್ಬಿನ ಬಿಟ್ಟ ಕಂಗಳ

ಹೊಳೆವ ಹಲುಗಳ ಕರ್ಣಶಿರ ಕೆಡೆದುದು ಧರಿತ್ರಿಯಲಿ

IV. ಯಾವುದಾದರೂ ಆರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (6×4=24)

1) ಅರ್ಜುನ ಮತ್ತು ಗಂಧರ್ವರ ನಡುವೆ ನಡೆದ ಯುದ್ಧವನ್ನು ವಿವರಿಸಿ.

2) ತಿರುನೀಲಕಂಠರು ಪುರದ ಬೀದಿಯಲ್ಲಿ ಬರುವಾಗ ನಡೆದ ಘಟನೆಯನ್ನು ಕುರಿತು ಬರೆಯಿರಿ.

3) ಅರ್ಜುನನು ಕರ್ಣನನ್ನು ಕೊಲ್ಲುವಂತೆ ಕೃಷ್ಣನು ಹೇಗೆ ಪ್ರೇರೇಪಿಸಿದನು ?

4) ರಾಮಿ ಕಾಳನನ್ನು ಭೇಟಿ ಮಾಡಿದ ಸಂದರ್ಭವನ್ನು ವಿವರಿಸಿ.

5) ಖಡ್ಗ ಬಂದ ಮೇಲೆ ರುದ್ರಪ್ಪನು ಹೇಗೆ ಬದಲಾದನು ?

6) ರತ್ನಾಕರವರ್ಣಿಯ ಕಾಲದಲ್ಲಿ ಜೈನಧರ್ಮ ಹೇಗಿತ್ತು ? ಎಂಬುದನ್ನು ಲೇಖನದ ಹಿನ್ನಲೆಯಲ್ಲಿ ವಿವರಿಸಿ.

7) ನಾಗ-ಮಲ್ಲಿಯರ ಸಂಸಾರವನ್ನು ಕುರಿತು ಬರೆಯಿರಿ.

8) ವೈದ್ಯ ಅಲಾವಿಖಾನನ ಕನಸನ್ನು ವಿವರಿಸಿ.

V. ನಾಲ್ಕು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ (4×10=40)

1) 'ನೂರಯ್ವರಾವಲ್ಲವೇ ?' ಕಾವ್ಯಭಾಗದ ಸ್ವಾರಸ್ಯ ಬರೆಯಿರಿ.

ಅಥವಾ

ಅರ್ಜುನನ ಮನಸ್ಸಿನಲ್ಲಿ ಕರ್ಣನ ಬಗ್ಗೆ ಇದ್ದ ಸೋದರ ಪ್ರೇಮ 'ಕರ್ಣನಾರೆಂದ' ಕಾವ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

2) ನಾರಣಪ್ಪನು ದ್ರೌಪದಿಯ ಶ್ರೀಮುಡಿಯನ್ನು ಚಿತ್ರಿಸಿರುವ ರೀತಿಯನ್ನು ಕುವೆಂಪು ಕಂಡಂತೆ ಬರೆಯಿರಿ.

ಅಥವಾ

ರತ್ನಾಕರವರ್ಣಿ ಜಿನಭಕ್ತಿಯನ್ನು ಹೇಗೆ ಪ್ರಚುರಪಡಿಸಿದ್ದಾನೆ ? ವಿವರಿಸಿ.

3) ಹಲವು ರೀತಿಯ 'ಲೂಟಿ'ಗೆ ಒಳಗಾದ ರಾಮಿಯ ಜೀವನವನ್ನು ಕುರಿತು ಬರೆಯಿರಿ.

ಅಥವಾ

ರುದ್ರಪ್ಪನಿಗೆ ನಿಂಗವ್ವ ಬುದ್ಧಿ ಕಲಿಸಿದ ರೀತಿಯನ್ನು ವಿಶ್ಲೇಷಿಸಿ.

4) ನಾದಿರ್‌ಷಾನ ವ್ಯಕ್ತಿತ್ವವನ್ನು ಚಿತ್ರಿಸಿ.

ಅಥವಾ

ಅಲಾವಿಖಾನ್, ಮಹಮದ್ ನಜರುದ್ದೀನ್ ಶಾ, ಸಾದತ್‌ಖಾನ್ ಇವರಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ.

---

## I Semester B.Com. Examination, October/November 2012
## (Repeaters)
## (Prior to 2011-12)
## ಕನ್ನಡ ಭಾಷಾ ಪತ್ರಿಕೆ - I
## ಸಾಹಿತ್ಯ ಸಂವಾದ - I

Time : 3 Hours  Max. Marks : 90

I. 1) ಅರ್ಥ ಬರೆಯಿರಿ : (4×1=4)

ಕಡಲು, ಮೇದಿನಿ, ಬಾನು, ಪಡುವಣ

2) ನಾನಾರ್ಥಗಳನ್ನು ಬರೆಯಿರಿ : (4×1=4)

ಪಡೆ, ಸುಳಿ, ತೆರೆ, ಕಾಡು.

3) ಮೂಲರೂಪ ಬರೆಯಿರಿ : (4×1=4)

ಬನ, ಅಚ್ಚರಿ, ಕ್ವಾಪ, ಮಿಷನು

4) ಈ ನುಡಿಗಟ್ಟುಗಳನ್ನು / ವಿಶೇಷ ಪ್ರಯೋಗಗಳನ್ನು ವಾಕ್ಯದಲ್ಲಿ ಬಳಸಿ. (4×1=4)

ಬಿಗಿಮುಷ್ಟಿ, ಜೀವಕೋಟಿ, ಜೋತುಬೀಳು, ದಾರಿದೀಪ

5) ನಾಲ್ಕು ಜೋಡಿಪದಗಳನ್ನು ಬರೆಯಿರಿ. (4×1=4)

6) ನಾಲ್ಕು ಅನುಕರಣ ಪದಗಳನ್ನು ಬರೆಯಿರಿ. (4×1=4)

7) ಈ ಗಾದೆ ಮಾತುಗಳನ್ನು ಸಂಕ್ಷಿಪ್ತವಾಗಿ ವಿವರಿಸಿ : (2×3=6)

ಅ) ಈಸಬೇಕು ಇದ್ದು ಜಯಿಸಬೇಕು

ಆ) ಅಲ್ಪರ ಸಂಗ ಅಭಿಮಾನ ಭಂಗ

II. ನಾಲ್ಕು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆ ಆಧರಿಸಿ ಉತ್ತರಿಸಿ : (4×5=20)

1) ಶ್ರಾವಣ ಕವಿತೆಯಲ್ಲಿ 'ಮನುಷ್ಯ–ನಿಸರ್ಗ' ಗಳ ಸಂಬಂಧ ಹೇಗೆ ವ್ಯಕ್ತವಾಗಿದೆ ?

2) ಪ್ರಗತಿಯ ಹೆಸರಿನಲ್ಲಿ ವಿಜ್ಞಾನ–ತಂತ್ರಜ್ಞಾನಗಳ ಪರಿಣಾಮಗಳನ್ನು 'ಮಿಲ್ಲು ಮತ್ತು ಹಕ್ಕಿ' ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

3) ಮುದ್ದಣ ಮನೋರಮೆಯರ ನಡುವಿನ ಸಂವಾದವನ್ನು ಕುರಿತು ಬರೆಯಿರಿ.

4) ಮಂಗಮ್ಮ–ನಂಜಮ್ಮ ಪರಸ್ಪರ ವಿರೋಧಿಗಳೇ ? ವಿಚಾರ ಮಾಡಿ.

5) 'ಬೆಳಗಾಗ ನಾನೆದ್ದು' ಜಾನಪದ ಗೀತೆಯಲ್ಲಿ ಮನುಷ್ಯ ಮತ್ತು ಭೂಮಿ ತಾಯಿಯ ಸಂಬಂಧ ಹೇಗೆ ಮೂಡಿಬಂದಿದೆ ?

6) 'ಸುಮ್ಮನೇ ಜೀವಿಸಿದ ಒಂದು ದಿನ' ಸುಮ್ಮನೆ ಹೇಗೆ ಕಳೆಯಿತು ? ತಿಳಿಸಿ.

III. ನಾಲ್ಕು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : (4×5=20)

1) 'ತಿರುವನಂತಪುರ' ಕವಿತೆಯಲ್ಲಿ ಆಧುನಿಕ ನಗರ ಜೀವನ ಹೇಗೆ ಚಿತ್ರಿತವಾಗಿದೆ ?

2) 'ಮಾನವ ನಿರ್ಮಿತ ಮಹಾ ಸಮಸ್ಯೆಗಳು' ಪಠ್ಯದಲ್ಲಿ 'ಏಕ ಮುಖ ಬೆಳವಣಿಗೆ' ಯ ವಿಚಾರಗಳು ಹೇಗೆ ವ್ಯಕ್ತವಾಗಿವೆ ?

3) 'ನೆನೆವುದೆನ್ನ ಮನಂ' ಕಾವ್ಯಭಾಗದಲ್ಲಿ ಪಂಪನ ನಾಡು ನುಡಿಯ ಅಭಿಮಾನ ಹೇಗೆ ವ್ಯಕ್ತವಾಗಿವೆ ?

4) ಭಾಷಾ ವೈವಿಧ್ಯವನ್ನೇಕೆ ಕಾಯ್ದುಕೊಳ್ಳಬೇಕೆಂಬುದನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

5) ಹೆಣ್ಣಿನ ಬದುಕಿನ ಸಾರ್ಥಕತೆಯ ಬೇರೆ ಬೇರೆ ಸಾಧ್ಯತೆಗಳು ಶಶಿ ಪಾತ್ರದ ಮೂಲಕ ಹೇಗೆ ವ್ಯಕ್ತಗೊಂಡಿದೆ ?

6) ಹೊರಜಗತ್ತಿಗೂ ಕಲಾವಿದನಿಗೂ ಇರುವ ಸಂಬಂಧ ಎಂತಹದು ? 'ರೇಖೆಗಳ ವೈಖರಿ' ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

IV. ಎರಡು ಪ್ರಶ್ನೆಗಳಿಗೆ ಅನುಭವದ ಹಿನ್ನೆಲೆಯಲ್ಲಿ ವಿವರಿಸಿ : (2×10=20)

1) 'ಮಿಲ್ಲು ಮತ್ತು ಹಕ್ಕಿ', 'ತಿರುವನಂತಪುರ' ಪದ್ಯಗಳಲ್ಲಿ ಚಿತ್ರಿತವಾಗಿರುವ ಆಧುನಿಕತೆಯ ಪರಿಣಾಮಗಳನ್ನು ವಿವರಿಸಿ.

2) ಕುವೆಂಪು ಕನ್ನಡ ಕವಿಯಾದ ಹಿನ್ನೆಲೆಯ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

3) ಮಂಗಮ್ಮ ಮಗ–ಸೊಸೆಯರಿಂದ ಬೇರೆಯಾಗಿ ಅನಂತರ ಒಟ್ಟಿಗೆ ಇರಲು ಕಾರಣವಾದ ಅಂಶಗಳನ್ನು ವಿವರಿಸಿ.

4) 'ಹೊಸ ಹುಟ್ಟು' ಕತೆಯಲ್ಲಿ 'ತಾಯ್ತನ' ದ ಆಶಯ ಹೇಗೆ ವ್ಯಕ್ತವಾಗಿದೆ ? ಚರ್ಚಿಸಿ.

---